

## ಮೂರು ಸಾವು!

ಟೀಚರ್: ಒಂದರಿಂದ ಹತ್ತರವರೆಗೆ ಹೇಳೊ ಗುಂಡ.

ಗುಂಡ: 1, 2, 4, 5, 6, 7, 8, 9, 10...

ಟೀಚರ್: ಮೂರು ಎಲ್ಲೋ?

ಗುಂಡ: ಮೂರು ಸತ್ತೋಗಿದೆ ಟೀಚರ್.

ಟೀಚರ್: ಯಾರೋ ಹೇಳಿದ್ದು?

ಗುಂಡ: ನಿನ್ನೆ ಪೇಪರ ನಲ್ಲಿ, ಬಂದಿತ್ತು ರಸ್ತೆ ಅಪಘಾತದಲ್ಲಿ ಮೂರು ಸಾವು ಅಂತ ಟೀಚರ್.

***

## ಇಡ್ಲಿ, ದೊಸೆ!

ಟೀಚರ್: ಕಾಯಿಸಿದಾಗ ಘನ ವಸ್ತುವಾಗಿ ಪರಿವರ್ತನೆ ಹೊಂದುವ ದ್ರವ ಯಾವುದು?

ಗುಂಡ: ಇಡ್ಲಿ ಮತ್ತು ದೋಸೆ.

***

## ಪಂದ್ಯ ರದ್ದು

ಟೀಚರ್: ಕ್ರಿಕೆಟ್ ಬಗ್ಗೆ ಅತಿ ಚಿಕ್ಕದಾದ ಪ್ರಬಂಧ ಬರೆಯಿರಿ.

ಗುಂಡ: ಮಳೆ ಬಂದ ಕಾರಣ, ಪಂದ್ಯವನ್ನು ರದ್ದುಗೊಳಿಸಲಾಗಿದೆ.

***



## 14ರಿಂದ 22ನೇ ಪುಟ!

ಶಿಕ್ಷಕ: ಮೊಘಲರು ಎಲ್ಲಿಯವರೆಗೆ ರಾಜ್ಯಭಾರ ಮಾಡಿದರು?

ವಿದ್ಯಾರ್ಥಿ: ಸುಮಾರು 14ನೇ ಪುಟದಿಂದ 22ನೇ ಪುಟದವರಗೆ.

***

## ಹೇಗಾದರೂ ಕರೆಯಿರಿ!

ಶಿಕ್ಷಕ: ಮಾತು ಬಾರದವನನ್ನು ಮೂಕ ಎಂದು ಕರೆದರೆ, ಕಿವಿ ಕೇಳಿಸದವನನ್ನು ಹೇಗೆ ಕರೆಯುತ್ತಾರೆ?

ವಿದ್ಯಾರ್ಥಿ: ಹೇಗೆ ಬೇಕಾದರೂ ಕರೆಯಬಹುದು, ಏಕೆಂದರೆ ಅವನಿಗೆ ಕಿವಿ ಕೇಳಿಸುವುದಿಲ್ಲ.

***

## ವಿದೇಶಿ ಜೀವನ ಶೈಲಿ

ಮಗ: ಅಪ್ಪ ನಿನ್ನೆ ನಾನು ಮದುವೆಯಾದೆ. ಆದರೆ ಮದುವೆಗೆ ನಿಮ್ಮನ್ನು ಕರೆಯಲಾಗಲಿಲ್ಲ. ದಯವಿಟ್ಟು ಕ್ಷಮಿಸಿ.

ತಂದೆ: (ನಗುತ್ತಾ) ಪರವಾಗಿಲ್ಲ ಬಿಡು. ಆದರೆ ಮುಂದೆ ಯಾವಾಗಲಾದರೂ ಮದುವೆ ಆದರೆ ಕರೆಯುವುದನ್ನು ಮರೆಯಬೇಡ.

***

## ಮೂರ್ಖ ಪತಿ

ಗಂಡ ಎದುರು ಅಪಾರ್ಟ್‌ಮೆಂಟ್‌ನಲ್ಲಿರುವವಳು ಐದು ನಿಮಿಷ ಕೈ ಅಲ್ಲಾಡಿಸಿದಳು. ಮತ್ತೆ ನಾನು ಕೂಡ ಕೈ ಆಡಿಸಿದೆ. ಅಷ್ಟರಲ್ಲಿ ಹಿಂದಿನಿಂದ ಬಂದ ಹೆಂಡತಿ ಗಂಡನಿಗೆ ತಟ್ಟಿ ಹೇಳಿದಳು ಅವಳು ಕಿಟಕಿಯ ಗಾಜು ಒರೆಸುತ್ತಿದ್ದಾಳೆ.

***

## ಆಟೊ ತಂದ ಆಪತ್ತು

ಗುಂಡ: ತಲೆಗೆ ಅಷ್ಟೊಂದು ಗಾಯ ಹೇಗಾಯ್ತು?

ಗೌಡ: ಹೆಂಡತಿ ಹೊಡೆದಳು.

ಗುಂಡ: ಯಾಕೆ?.

ಗೌಡ: ಅವಳ ಅಪ್ಪ ಅಮ್ಮ ಬಂದಿದ್ದರು. ಹೊರಗೆ ಹೋಗಿ ಏನಾದ್ರೂ ತನ್ನಿ ಎಂದಳು. ನಾನು ಹೋಗಿ ಆಟೊ ತಂದೆ ಅಷ್ಟೇ.

***

## ಬದುಕ್ಕಿದ್ದರೆ ನಾಳೆ ತನ್ನಿ

ಮಂಜಣ್ಣ: ನೋಡಪ್ಪಾ, ವಯಸ್ಸಾದ ಕಾರಣ, ಕೆನ್ನೆ ಏರು ತಗ್ಗಾಗಿದೆ, ಗಡ್ಡ ಸರಿಯಾಗಿ ಹೋಗಿಲ್ಲ. ಸ್ವಲ್ಪ ನೋಡಿ ಗಡ್ಡ ಚೆನ್ನಾಗಿ ತೆಗಿ.

ಸಲೂನ್‌ನವ: ಹೆದರಬೇಡಿ. ನನ್ನ ಹತ್ತಿರ ನಿಂಬೆ ಹಣ್ಣಿನ ಗಾತ್ರದ ಮರದಿಂದ ಮಾಡಿದ ಉಂಡೆ ಇದೆ. ಅದನ್ನು ಬಾಯಲ್ಲಿ ಇಟ್ಟುಕೊಳ್ಳಿ. ನಾನು ಗಡ್ಡ ತೆಗೆಯುವಾಗ, ಎಡಕ್ಕೆ ಬಲಕ್ಕೆ ದೂಡಿ.

ಮಂಜಣ್ಣ: ಸರಳ ಉಪಾಯ. ಚೆನ್ನಾಗಿದೆ ಹಾಗೇ ಮಾಡು. ಆದರೆ, ಒಂದು ಅನುಮಾನ. ನಿನ್ನ ಬಳಿಗೆ ಬರುವ ನನ್ನಂಥವರಿಗೆಲ್ಲ ಇದೇ ಉಂಡೆ ಕೊಡುತ್ತೀಯೋ ಹೇಗೆ?

ಸಲೂನ್‌ನವ: ಒಂದೇ ಮಂಜಣ್ಣ. ಯಾಕೆ?

ಮಂಜಣ್ಣ: ಅಯ್ಯೋ ದೇವರೆ ಕೊರೊನಾ ಬಂದರೆ ಏನು ಮಾಡುವುದು?

ಸಲೂನ್‌ನವ: ಅದರಲ್ಲೇನು, ಬದುಕಿದ್ದರೆ ನಾಳೆ ಬೆಳಿಗ್ಗೆ ತಂದು ಕೊಡಿ. ಎಲ್ಲರೂ ಹಾಗೇ ಮಾಡುವುದು.

***

## ಜೇಬುಗಳ್ಳ

ಒಬ್ಬ ಜೇಬುಗಳ್ಳ ಮೋಟಾರ್ ಬೈಕ್ ಓಡಿಸುತ್ತಿದ್ದವನನ್ನು ನಿಲ್ಲಿಸಿ, ಲಿಫ್ಟ್ ಕೊಡುವಂತೆ ಯಾಚಿಸಿದ. ಮೋಟಾರ್ ಬೈಕ್ ಸವಾರ ಅವನನ್ನು ಹತ್ತಿಸಿಕೊಂಡ. ಆದರೆ ಮಾರ್ಗ ಮಧ್ಯದಲ್ಲಿ ಜೇಬುಗಳ್ಳ ಅವನ ಪ್ಯಾಂಟಿನ ಜೇಬಿಗೇ ಕೈಹಾಕುವ ಪ್ರಯತ್ನವನ್ನು ಮಾಡುತ್ತಿರುವುದನ್ನು ಗಮನಿಸಿದ. ಅಕಸ್ಮಾತ್ ಬೈಕ್ ಅಪಘಾತಕ್ಕೀಡಾಯಿತು. ಆದರೆ ಪ್ರಾಣ ಹಾನಿಯಾಗಲಿಲ್ಲ. ಪೊಲೀಸು ಬಂದು ಬೈಕ್ ನಂಬರ್ ಮತ್ತು ಲೈಸೆನ್ಸ್ ನಂಬರನ್ನು ತನ್ನ ಡೈರಿಯಲ್ಲಿ ಬರೆದುಕೊಂಡು ಹೋದ. 'ನಿನ್ನಿಂದಾಗಿ ನಾನೀಗ ಕೋರ್ಟಿಗೆ ಹೋಗಬೇಕಾಯಿತು' ಎಂದು ಬೈಕ್‌ನವನು ಜೇಬುಗಳ್ಳನನ್ನು ಬೇಸರದಿಂದ ನೋಡಿದ. ಸ್ವಲ್ಪ ಹೊತ್ತಿನಲ್ಲೇ ಜೇಬುಗಳ್ಳ ಒಂದು ಡೈರಿಯನ್ನು ಅವನಿಗೆ ಕೊಡುತ್ತಾ ಹೇಳಿದ, 'ನಿಮಗೆ ಆ ತೊಂದರೆ ಬರುವುದಿಲ್ಲ, ಪೊಲೀಸಿನವನು ನಿಮ್ಮ ಗಾಡಿ ನಂಬರ್ ಮತ್ತು ಲೈಸೆನ್ಸ್ ನಂಬರನ್ನು ಬರೆದುಕೊಂಡಿದ್ದನಲ್ಲ, ಆ ಡೈರಿ ಇದೇ! ಇದನ್ನು ನೀವಿಟ್ಟುಕೊಳ್ಳಿ' ಎಂದ!

(ಸಂಗ್ರಹ) ಶಿವಮೊಗ್ಗ ರಮೇಶ್, ಮೈಸೂರು


